ಸರ್ಕಾರ ನೂರು ಕೋಟಿ ರೂಪಾಯಿಗಳ ಸಹಾಯವನ್ನು ಕೊಟ್ಟು ಈ ಗಣಿಯನ್ನು ರನ್ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಅಶೋಕ್ ಮಿತ್ರರವರು ಈ ಗಣಿಯನ್ನು ರನ್ ಮಾಡಬಹುದು, ಇನ್ನು 80 ಕಿ.ಮೀ ಚಿನ್ನವಿದೆ ಎಂದು ಹೇಳಿದ್ದಾರೆ. ಇನ್ನು 35 ವರ್ಷಗಳು ಚಿನ್ನವನ್ನು ಪಡೆಯಬಹುದೆಂದು ಟೆಕ್ನಿಕಲ್ ವರದಿಯನ್ನು ನೀಡಿದ್ದಾರೆ. ಕೇಂದ್ರ ಸರ್ಕಾರದವರು ಇದನ್ನು ಮುಚ್ಚಬೇಕೆಂದು ಮುಚ್ಚಿದ್ದಾರೆ, ನಾನು ಇದನ್ನು ಖಂಡಿಸಿ ಈ ಶಾಸನಸಭೆ ನಡೆಯುವ ಕೊನೆಯ ದಿವಸದವರೆಗೂ ಧರಣಿ ಕುಳಿತುಕೊಳ್ಳುತ್ತೇನೆ. ಕೇಂದ್ರ ಸರ್ಕಾರದವರು ನಮ್ಮ ಕೆ.ಜಿ.ಎಫ್.ಗೆ ದ್ರೋಹ ಮಾಡಿದ್ದಾರೆ. ರಾಜ್ಯ ಸರ್ಕಾರದಿಂದ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರಕ್ಕೆ ಪತ್ರವನು ಬರೆದಿದ್ದಾರೆ, ಅದನ್ನು ಕೇರ್ ಮಾಡಿಲ್ಲ. ಇಲ್ಲಿ ಇರುವಂತಹ ಎಸ್.ಸಿ. ಜನಾಂಗದವರಿಗೆ ಅನ್ಯಾಯವನ್ನು ಮಾಡಿದ್ದಾರೆ. ಈ ವಿಚಾರವಾಗಿ ಕೆ.ಜಿ. ಎಫ್.ನಲಿ ಮಾತ್ರ ಹೋರಾಟ ವಾಗಿದೆ ಎಂದಲ್ಲ, ಡಾ॥ ರಾಜ್‌ಕುಮಾರ್ ಮಂಡಳಿ, ಶಿವಮೊಗ್ಗ ಮತ್ತು ಭದ್ರಾವತಿಗಳಲ್ಲೂ ಬೆಂಗಳೂರಿನಲ್ಲಿ ಎಲ್ಲಾ ಕಡೆಗಳಲ್ಲೂ ಹೋರಾಟ ಮಾಡಿದ್ದಾರೆ.

ಹೋರಾಟವಾಗಿದೆ ಎಂದಲ್ಲ, ಡಾ॥ ರಾಜ್‌ಕುಮಾರ್ ಮಂಡಳಿ, ಶಿವಮೊಗ್ಗ ಮತ್ತು ಭದ್ರಾವತಿಗಳಲ್ಲೂ ಬೆಂಗಳೂರಿನಲ್ಲಿ ಎಲ್ಲಾ ಕಡೆಗಳಲ್ಲೂ ಹೋರಾಟ ಮಾಡಿದ್ದಾರೆ.

ಮುಖ್ಯಮಂತ್ರಿಯವರು ಕೇಂದ್ರಕ್ಕೆ ಪತ್ರವನು ಬರೆದಿದ್ದಾರೆ, ಅದನ್ನು ಕೇರ್ ಮಾಡಿಲ್ಲ. ಇಲ್ಲಿ ಇರುವಂತಹ ಎಸ್.ಸಿ. ಜನಾಂಗದವರಿಗೆ ಅನ್ಯಾಯವನ್ನು ಮಾಡಿದ್ದಾರೆ. ಈ ವಿಚಾರವಾಗಿ ಕೆ.ಜಿ. ಎಫ್.ನಲಿ ಮಾತ್ರ ಹೋರಾಟ ವಾಗಿದೆ ಎಂದಲ್ಲ, ಡಾ॥ ರಾಜ್‌ಕುಮಾರ್ ಮಂಡಳಿ, ಶಿವಮೊಗ್ಗ ಮತ್ತು ಭದ್ರಾವತಿಗಳಲ್ಲೂ ಬೆಂಗಳೂರಿನಲ್ಲಿ ಎಲ್ಲಾ ಕಡೆಗಳಲ್ಲೂ ಹೋರಾಟ ಮಾಡಿದ್ದಾರೆ. ನಮ್ಮ ರಾಜ್ಯದ ಪೊಲೀಸರು ಲಾಠಿ ಚಾರ್ಜ್ ಮಾಡಿದ್ದಾರೆ, ನಮ್ಮ ಹೆಣ್ಣು ಮಕ್ಕಳಿಗೂ ಅನ್ಯಾಯವಾಗಿದೆ. ನಮ್ಮ ಕೆ.ಜಿ.ಎಫ್.ನಲ್ಲಿ ಈ ಚಿನ್ನದ ಗಣಿ ಬಿಟ್ಟರೆ ಬೇರೆ ಏನೂ ಇಲ್ಲ, ಕೇಂದ್ರ ಸರ್ಕಾರದವರು ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ಅದನ್ನು ಖಂಡಿಸಿ ನಾನು ಸದನದ ಕೊನೆಯ ದಿವಸದವರೆಗೂ ಧರಣಿಗೆ ಕುಳಿತುಕೊಳ್ಳುತ್ತೇನೆ. ಅವರು ಈ ಗಣಿಯನ್ನು ಮತ್ತೆ ರಿ-ಕನ್ಸಿಡರ್ ಮಾಡಬೇಕು, ಮತ್ತೆ ರಾಜ್ಯ ಸರ್ಕಾರದವರು ಅಲ್ಲಿ ನೀರು ಮತ್ತು ಆಸ್ಪತ್ರೆಗಳ ಸೌಲಭ್ಯಗಳನ್ನು ಮಾಡಿಕೊಡಬೇಕೆಂದು ನಾನು ಆಗ್ರಹ ಪಡಿಸುತ್ತಾ ಧರಣಿಗೆ ಕುಳಿತುಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಭಕ್ತವತ್ಸಲಂರವರು ಸದನದ ಬಾವಿಗೆ ಬಂದು ಧರಣಿಗೆ ಕುಳಿತರು)

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ವೈಸ್ ಚೇರ್ಮನ್‌ರವರೆ, ತಮ್ಮ ಕೈಲಾದಷ್ಟು ಪ್ರಯತ್ನವನ್ನು ಈ ವಿಚಾರದಲ್ಲಿ ಮಾಡಿದ್ದಾರೆ, ಈ ವಿಚಾರ ನಮ್ಮ ಗಮನದಲ್ಲೂ ಇದೆ. ಮಾನ್ಯ ಮುಖ್ಯಮಂತ್ರಿಯವರು ಸಹ ಈ ಗಣಿಯನ್ನು ಮುಚ್ಚಬಾರದೆಂದು ಸ್ವತಃ ನಿಯೋಗವನ್ನು ತೆಗೆದುಕೊಂಡು ಹೋಗಿ ಕೇಂದ್ರದೊಡನೆ ಮಾತನಾಡಿದ್ದಾರೆ. ಆದರೆ ಅಲ್ಲಿ ಎಲ್ಲಾ ಬಡವರೇ ಇರುವುದರಿಂದ ಒಂದು ಮಾನವೀಯತೆ ದೃಷ್ಟಿಯಿಂದ ಕುಡಿಯುವ ನೀರನ್ನು ಮತ್ತು ಬೆಳಕಿಗೋಸ್ಕರ ವಿದ್ಯುಚ್ಛಕ್ತಿಯನ್ನು ಕೊಡುವಂಥಾದ್ದಕ್ಕೆ ರಾಜ್ಯ ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಕೇಂದ್ರ ಸರ್ಕಾರದವರು ಏನು ಬೇಕೋ ಅವರು ಮಾಡುತ್ತಿದ್ದಾರೆ. ಆದರೆ ರಾಜ್ಯ ಸರ್ಕಾರ ತಕ್ಷಣಕ್ಕೆ ವಿದ್ಯುಚ್ಛಕ್ತಿ, ನೀರು ಮತ್ತು ಆಸ್ಪತ್ರೆಯ ಸೌಲಭ್ಯಗಳನ್ನು ಕೊಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.